ದಿನಾಂಕ 16.12.2016 ರ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ 7ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಪಿಎಸ್ ವಕೀಲರಿಂದ ಃ

ನಾನು ದಾವಾ ಆಸ್ತಿಯನ್ನು ಖರೀದಿ ಮಾಡುವಾಗ ಖಾಲಿ ನಿವೇಶನವಾಗಿತ್ತು, 1980 ರಲ್ಲಿ ನಾನು ಮನೆಯನ್ನು ಕಟ್ಟಿದ್ದೇನೆ. ಪರವಾನಗಿಯನ್ನು ತೆಗೆದುಕೊಂಡು ನಾನು ಮನೆಯನ್ನು ನಿರ್ಮಿಸಿರುತ್ತೇನೆ. ಪರವಾನಗಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಲು ಯಾವುದೇ ಪರವಾನಗಿಯನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಪೂರ್ವ ಪಶ್ಚಿಮ 18 ಅಡಿ ಉತ್ತರ ದಕ್ಷಿಣ 25 ಅಡಿ ಹೆಂಚಿನ ಮನೆಯನ್ನು ನಾನು ಕಟ್ಟಿದ್ದೇನೆ. ನಾನು ಪೂರ್ವಕ್ಕೆ 17 ಅಡಿ ಜಾಗವನ್ನು ಬಿಟ್ಟಿರುತ್ತೇನೆ. 17 ಅಡಿ ಆದ ನಂತರ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯು ಪಂಚಾಯಿತಿ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಪೂರ್ವ ಪಶ್ಚಿಮ 11 ಅಡಿ ಅಗಲ ಇದೆ. ಸದರಿ ಪಂಚಾಯಿತಿ ರಸ್ತೆ ಬಗ್ಗೆ ನನಗೆ ಯಾವುದೇ ಮಾಲೀಕತ್ವ ಇಲ್ಲ. ನಾನು ಸದರಿ ರಸ್ತೆಯನ್ನು ಷೆಡ್ಯೂಲ್ ಬಿ ಯಾಗಿ ತೋರಿಸಿರುತ್ತೇನೆ ಎಂದರೆ ಸರಿ. ಸದರಿ 11 ಅಡಿ ಅಗಲದ ಪಂಚಾಯಿತಿ ರಸ್ತೆ ಸಾರ್ವಜನಿಕರದ್ದು ಎಂದರೆ ಸರಿ. ಈ ದಾವಾಯನ್ನು ನಾನು ನನ್ನ ಪರ ಮತ್ತು ಸಾರ್ವಜನಿಕರ ಪರವಾಗಿ ಹಾಕಿರುತ್ತೇನೆ. ನಾನು ಕಾನೂನು ಪ್ರಕಾರ ಈ ದಾವೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಉಳಿಕೆ 17 ಅಡಿ ಜಾಗಕ್ಕೆ ನಾನು ಯಾವುದೇ ಆವರಣ ಗೋಡೆಯನ್ನು ಹಾಕಿರುವುದಿಲ್ಲ. 2ನೇ ಪ್ರತಿವಾದಿಯ ನನ್ನ ದಾವಾ ಸ್ವತ್ತಿನ ಉತ್ತರಕ್ಕಿರುವ ಮಾಲೀಕರು ಎಂದರೆ ಸರಿ. ನಾನು 50 ಇಂಟು 35 ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಉತ್ತರ ಕಡೆಗೆ ಉಳಿದರ್ಧವನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. 2ನೇ ಪ್ರತಿವಾದಿಯು ನಾನು ಮನೆಯನ್ನು ಕಟ್ಟಿದ ನಂತರ ಕಟ್ಟಿರುತ್ತಾನೆ. 2ನೇ ಪ್ರತಿವಾದಿಯು 30 ಇಂಟು 25 ರಲ್ಲಿ ಸಂಪೂರ್ಣವಾಗಿ ಮನೆಯನ್ನು ಕಟ್ಟಿರುತ್ತಾನೆ. 09.02.2010 ರಂದು 2ನೇ ಪ್ರತಿವಾದಿಯಿಂದ 7ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿ ಪೂರ್ವಕ್ಕೆ 12 ಜಾಗ ಬಿಟ್ಟು ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಿಪಿ-15 ರಲ್ಲಿ ಬೇಲಿ ಒಳಗಡೆ ಇರುವ ಮನೆಯು ನನ್ನ ಮನೆಯಾಗಿರುತ್ತದೆ. ನಾನು ಕಂಬವನ್ನು ನೆಟ್ಟು ಮುಳ್ಳುತಂತಿ ಬೇಲಿ ಹಾಕಿ ಅದಕ್ಕೆ ಬಳ್ಳಿಯನ್ನು ಹಬ್ಬಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಲ್ಲು ಕಂಬ ಮತ್ತು ಮುಳ್ಳು ತಂತಿಯನ್ನು ಸಲೀಂರವರು ನೆಟ್ಟಿರುತ್ತಾರೆ ನಾನು ನೆಟ್ಟಿರುವುದಿಲ್ಲ. ಸದರಿ ಕಲ್ಲು ಕಂಬ ನೆಟ್ಟು ಸುಮಾರು 7-8 ವರ್ಷವಾಯಿತು ಆ ಸಂಬಂಧ ನಾನು ಬೇರೆ ದಾವೆಯನ್ನು ಹಾಕಿರುತ್ತೇನೆ. ಸಲೀಂರವರ ನಿವೇಶನವು ನಮ್ಮ ನಿವೇಶನದ ಹತ್ತಿರವಾಗಲೀ ಪ್ರತಿವಾದಿ ನಿವೇಶನದ ಹತ್ತಿರವಾಗಲೀ ಇಲ್ಲ ಎಂದರೆ ಸರಿ. ನನ್ನ ಮನೆಯ ಮುಂದುಗಡೆ ಸಲೀಂರವರು ಕಲ್ಲು ಕಂಬ

ಹಾಕಿ ಮುಳ್ಳು ತಂತಿ ಹಾಕಿರುವ ವಿಚಾರವನ್ನು ದಾವೆಯಲ್ಲಿ ಹೇಳಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿಯು ಈ ಕೇಸನ್ನು ಹಾಕಿದ ನಂತರ ನೆಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 8 ವರ್ಷಗಳ ಹಿಂದೆ ಬೇಲಿ ಹಾಕಿರುವುದು ಸರಿಯಾ ಅಥವಾ ಕೇಸನ್ನು ಹಾಕಿದ ನಂತರ ಬೇಲಿ ಹಾಕಿರುವುದು ಸರಿಯಾ ಎಂಬ ಪ್ರಶೆಗೆ ಸಾಕ್ಷಿಯು ನಾನು ದಾವೆಯನ್ನು ಹಾಕಿದ ನಂತರ ಬೇಲಿ ಹಾಕಿರುವುದು ಸರಿ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ತಿದ್ದುಪಡಿ ಮಾಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಅನುಭವ ಇಲ್ಲ ಎಂದು ನುಡಿಯುತ್ತಾರೆ ಸದರಿ ದಾವೆಯ ದಾವಾ ಕಾಪಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿಯು ಮೌನವಾಗಿದ್ದಾರೆ.

ಬಿ. ಸಿದ್ದಯ್ಯ ಯಾರು ಮತ್ತು ಸದರಿ ವ್ಯಕ್ತಿಗೆ ದಾವಾ ಸ್ವತ್ತಿನ ಆಜುಬಾಜಿನಲ್ಲಿ ಯಾವುದೇ ಆಸ್ತಿ ಇಲ್ಲದ ವ್ಯಕ್ತಿ ಎಂದರೆ ಸಾಕ್ಷಿಯು 19 ಅಡಿ ಜಾಗ ಆತನಿಗೆ ಇದೆ ಎಂದು ನುಡಿಯುತ್ತಾರೆ. ನಮ್ಮ ಜಮೀನಿನ ಪೂರ್ವಕ್ಕೆ ಅವರಿಗೆ 19 ಅಡಿ ಜಾಗ ಇದೆ ಸಾಕ್ಷಿಯು ಮುಂದುವರಿದು ರಸ್ತೆಯ ನಂತರ ಇದೆ ಎಂದು ನುಡಿಯುತ್ತಾರೆ. ನಾನುಈ ಹಿಂದೆ ಸಿದ್ದಯ್ಯನ ವಿರುದ್ಧ ದಾವೆಯನ್ನು ಹಾಕಿದು ಮತ್ತು ಮೇಲ್ಮನವಿ ಸಲ್ಲಿಸಿ ರಾಜಿ ಮಾಡಿಕೊಂಡಿರುವುದು ಪರಸ್ಪರ ಶಾಮೀಲಾಗಿರುವುದು ಸರಿಯಲ್ಲ, 2ನೇ ಪ್ರತಿವಾದಿಯು ಆತನ ಜಾಗದಲ್ಲಿ ಆವರಣ ಗೋಡೆ ಮತ್ತು ಶೌಚಾಲಯವನ್ನು ನಿರ್ಮಿಸಿದ್ದರುಎಂದರೆ ಸಾಕ್ಷಿಯು ಶೌಚಾಲಯವನ್ನು ನಿರ್ಮಿಸಿದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ರಸ್ತೆಯನ್ನು ಅತಿಕ್ರಮಣ ಮಾಡಿದ್ದಾರೆ ಎಂದು ನುಡಿಯುತ್ತಾರೆ. 7ನೇ ಪ್ರತಿವಾದಿಯ ಉತ್ತರಕ್ಕೆ ಅಡ್ಡರಸ್ತೆ ಇದೆ ಎಂದರೆ ಸರಿ. 1ನೇ ಪ್ರತಿವಾದಿಯ ಮನೆಯ ದಕ್ಷಿಣಕ್ಕೆ ಒಂದು ಅಡ್ಡರಸ್ತೆ ಇದೆ ಎಂದರೆ ಸರಿ. ನಿಪಿ-13 ಮತ್ತು 14 ರಲ್ಲಿ 1ನೇ ಪ್ರತಿವಾದಿಯು ಆವರಣ ಗೋಡೆ ನಿರ್ಮಿಸಿರುತ್ತಾರೆ. ನಿಪಿ-14 ರಲ್ಲಿ ಕಾಣುವ ಮನೆಯು 1ನೇ ಪ್ರತಿವಾದಿಯಾಗಿರುತ್ತದೆ ಆಕೆಯ ಮನೆಯ ಮುಂದಿರುವ ರಸ್ತೆಯು ದಕ್ಷಿಣಕ್ಕೆ ಇರುವ ರಸ್ತೆ ಎಂದರೆ ಸರಿ. ನಿಪಿ-16 ರಲ್ಲಿರುವ ರಸ್ತೆಯು ಉತ್ತರಕ್ಕಿರುವ ರಸ್ತೆಯಾಗಿರುತ್ತದೆ. ನಿಪಿ-17 ರಿಂದ 20 ರಲ್ಲಿ ಕಾಣುವ ಆವರಣ ಗೋಡೆ 1ನೇ ಪ್ರತಿವಾದಿ ಹಾಕುತ್ತಿದ್ದಾಗ ತೆಗೆದ ಫೋಟೋ ಎಂದರೆ ಸರಿ. ಪೂರ್ವದ ಕಡೆಯಿರುವ ರಸ್ತೆ ಬಗ್ಗೆ ಯಾವುದೇ ಫೋಟೋವನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಮೌನವಾಗಿದ್ದಾರೆ.

ಮುಂದುವರಿದ ಪಾಟೀ ಸವಾಲು ಮಾಡಲು ಎಪಿಎಸ್ ವಕೀಲರು ಸಮಯಾವಕಾಶ ಕೋರಿದ್ದು ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,
ಟಿ ನರಸೀಪುರ.